# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 746 |
| ಸದಸ್ಯರ ಹೆಸರು | : | ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 12.12.2025. |
| ಉತ್ತರಿಸುವವರು | : | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿಗಳ ಅವಧಿ ಮುಗಿದು ಎಷ್ಟು ವರ್ಷಗಳಾಗಿವೆ; ಅವಧಿ ಮೀರಿದರೂ ಮರು ಚುನಾವಣೆ ನಡೆಯದಿರಲು ಕಾರಣವೇನು; | 1. ರಾಜ್ಯದ ಗ್ರಾಮ ಪಂಚಾಯತಿಗಳಿಗೆ ಡಿಸೆಂಬರ್ 2020 ರಲ್ಲಿ ಸದಸ್ಯ ಸ್ಥಾನಗಳಿಗೆ ಚುನಾವಣೆ ನಡೆಸಲಾಗಿರುತ್ತದೆ. ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಹುದ್ದೆಗಳಿಗೆ ಜನವರಿ-ಫೆಬ್ರುವರಿ 2021 ರಲ್ಲಿ ಚುನಾವಣೆ ನಡೆಸಿ ಆಯ್ಕೆ ಮಾಡಲಾಗಿದ್ದು, ಈ ಅವಧಿಯು ಜನವರಿ- ಫೆಬ್ರುವರಿ 2026 ರವರೆಗೆ ಇರುತ್ತದೆ. ಅವಧಿ ಮುಗಿದ ನಂತರ ಚುನಾವಣೆ ನಡೆಸಲು ಕ್ರಮ ವಹಿಸಲಾಗುವುದು.<br><br>2. ಗ್ರಾಮ ಪಂಚಾಯತಿಗಳಿಗೆ ಮೀಸಲಾತಿಯನ್ನು ನಿಗಧಿಪಡಿಸಿ ಅಧಿಸೂಚನೆಯನ್ನು ರಾಜ್ಯ ಚುನಾವಣಾ ಆಯೋಗಕ್ಕೆ ಒದಗಿಸುವಂತೆ ಸರ್ಕಾರದ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ 33211/2025(PIL) ದಾಖಲಿಸಿದ್ದು, ಪ್ರಕರಣವು ದಿನಾಂಕ:11.12.2025 ರಂದು ವಿಚಾರಣೆಗೆ ಬಂದಿದ್ದು, ಮುಂದಿನ ವಿಚಾರಣೆಯನ್ನು ದಿನಾಂಕ:28.01.2026ಕ್ಕೆ ನಿಗಧಿಪಡಿಸಿರುತ್ತದೆ.<br><br>3. ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯಿತಿಗಳ ಅವಧಿಯು ಜೂನ್ 2021ಕ್ಕೆ ಮುಕ್ತಾಯಗೊಂಡಿರುತ್ತದೆ. ಅವಧಿಯು ಮುಗಿದ ನಂತರ ಚುನಾವಣೆಯನ್ನು ನಡೆಸುವ ಸಿದ್ಧತೆಯಲ್ಲಿದ್ದಾಗ ರಾಜ್ಯದಲ್ಲಿ ಕೋವಿಡ್ ಸಾಂಕ್ರಾಮಿಕ ರೋಗ ಹಿನ್ನೆಲೆಯಲ್ಲಿ ಚುನಾವಣೆ ನಡೆಸಲು ಸಾಧ್ಯವಾಗಲಿಲ್ಲ.<br><br>4. ತದನಂತರ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ಕ್ಕೆ ತಿದ್ದುಪಡಿ ತಂದು ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗವನ್ನು ರಚಿಸಲಾಗಿತ್ತು. ಆಯೋಗವು ನೀಡಿದ ಶಿಫಾರಸ್ಸಿನಂತೆ ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಯ ಸೀಮಾ ಗಡಿಯನ್ನು ಗುರುತಿಸಿ ಅಧಿಸೂಚಿಸಲಾಗಿತ್ತು.<br><br>5. ನಗರಾಭಿವೃದ್ಧಿ ಇಲಾಖೆಯು ಸೆಪ್ಟೆಂಬರ್-ಅಕ್ಟೋಬರ್ - 2025ರಲ್ಲಿ ಕೆಲವು ಗ್ರಾಮ ಪಂಚಾಯತಿಗಳನ್ನು ಪಟ್ಟಣ ಪಂಚಾಯತಿ / ಪುರಸಭೆ / ನಗರ ಸಭೆಗಳಾಗಿ ಪರಿವರ್ತನೆ ಮಾಡಿ ಅಧಿಸೂಚನೆ ಹೊರಡಿಸಿದ್ದರಿಂದ 07 ಜಿಲ್ಲೆಗಳು |
| (ಆ) | ಅವಧಿ ಮುಗಿದ ತ್ರಿಸ್ತರ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಕ್ಷೇತ್ರ ಪುನರ್ ವಿಂಗಡಣೆ ಮಾಡಿ ಯಾವಾಗ ಚುನಾವಣೆ ನಡೆಸಲಾಗುವುದು; ಪಂಚಾಯತ್ ರಾಜ್ ಸಂಸ್ಥೆಗಳಿಗೆ ಕ್ಷೇತ್ರ ಪುನರ್ ವಿಂಗಡಣೆ ಪೂರ್ಣಗೊಂಡಿದೆಯೇ; | |

| | | |
|---|---|---|
| | | ಮತ್ತು 08 ತಾಲ್ಲೂಕುಗಳಿಗೆ ಸಂಬಂಧಿಸಿದಂತೆ ಜಿಲ್ಲಾ ಪಂಚಾಯತಿ ಹಾಗೂ ತಾಲ್ಲೂಕು ಪಂಚಾಯತಿಗಳ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ವ್ಯಾಪ್ತಿಯಿಂದ ಕೈ ಬಿಡಲು ಅಧಿಸೂಚನೆ ಹೊರಡಿಸಿ, ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತಿಗಳ ಸೀಮಾ/ ಗಡಿಯನ್ನು ಗುರುತಿಸಿ ದಿನಾಂಕ:09.12.2025 ರಂದು ಅಧಿಸೂಚಿಸಲಾಗಿದೆ.<br><br>6. ಮೇಲಿನ ಎಲ್ಲಾ ವಿವರಗಳ ಮಾಹಿತಿಯೊಂದಿಗೆ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆ ನಡೆಸುವುದಕ್ಕೆ ಸಂಬಂಧಿಸಿದಂತೆ ಸಚಿವ ಸಂಪುಟದ ಆದ್ಯ ಗಮನಕ್ಕೆ ತರಲಾಗಿದೆ.<br><br>7. ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತಿ ಚುನಾವಣೆಗಳಿಗೆ ಸಂಬಂಧಿಸಿದಂತೆ ಮೀಸಲಾತಿ ಅಧಿಸೂಚನೆ ರಾಜ್ಯ ಚುನಾವಣಾ ಆಯೋಗಕ್ಕೆ ಒದಗಿಸುವಂತೆ ಸರ್ಕಾರದ ವಿರುದ್ಧ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ನ್ಯಾಯಾಂಗ ನಿಂದನಾ ಅರ್ಜಿ ಸಂಖ್ಯೆ (CCC No).534/2024ನ್ನು ದಾಖಲಿಸಿದ್ದು, ಪ್ರಕರಣವು ದಿನಾಂಕ:12.12.2025 ರಂದು ವಿಚಾರಣೆಗೆ ಬಂದಿದ್ದು, ಮಾನ್ಯ ಅಡ್ವೋಕೇಟ್ ಜನರಲ್ ರವರ ಮನವಿ ಮೇರೆಗೆ ಮುಂದಿನ ವಿಚಾರಣೆಯನ್ನು ದಿನಾಂಕ:30.01.2026ಕ್ಕೆ ನಿಗಧಿಪಡಿಸಿರುತ್ತದೆ.<br><br>8. ಈಗಾಗಲೇ 31 ಜಿಲ್ಲಾ ಪಂಚಾಯಿತಿಗಳು ಮತ್ತು 239 ತಾಲ್ಲೂಕು ಪಂಚಾಯಿತಿಗಳಿಗೆ ಸಂಬಂಧಿಸಿದಂತೆ ಕರಡು ಮೀಸಲಾತಿಯನ್ನು ಸಿದ್ದಪಡಿಸಲು ಇಲಾಖಾ ಹಂತದಲ್ಲಿ ಕ್ರಮ ಕೈಗೊಳ್ಳಲಾಗಿದೆ.<br><br>9. ತಾಲ್ಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿ ಕ್ಷೇತ್ರಗಳಿಗೆ ಸರ್ಕಾರವು ಅಂತಿಮ ಮೀಸಲಾತಿಯನ್ನು ಅಧಿಸೂಚಿಸಿ ರಾಜ್ಯ ಚುನಾವಣಾ ಆಯೋಗಕ್ಕೆ ಒದಗಿಸಿದ ನಂತರ ರಾಜ್ಯ ಚುನಾವಣಾ ಆಯೋಗವು ಚುನಾವಣೆ ನಡೆಸಲು ಕ್ರಮ ಕೈಗೊಳ್ಳಬೇಕಿದೆ. |
| (ಇ) | ಗ್ರಾಮ ಪಂಚಾಯಿತಗಳಿಗೂ ಬಹುಸಂಖ್ಯೆ ಸದಸ್ಯ ವಾರ್ಡ್ ವ್ಯವಸ್ಥೆಯನ್ನು ಬದಲಾಯಿಸಿ ವಾರ್ಡಗೊಬ್ಬ ಸದಸ್ಯರಂತೆ ಮರುವಿಂಗಡನೆ ಮಾಡಿ ಪಕ್ಷಾದಾರಿತ ಅಧೀಕೃತ ಪಕ್ಷದ ಚಿಹ್ನೆಯಡಿ ಚುನಾವಣೆ ನಡೆಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ.: ಯಾವಾಗ ಚುನಾವಣೆ ನಡೆಸಲಾಗುವುದು: | ಗ್ರಾಮ ಪಂಚಾಯಿತಿಗಳಿಗೆ ಪಕ್ಷದ ಆಧಾರದ ಮೇಲೆ, ಏಕ ಚುನಾವಣಾ ಕ್ಷೇತ್ರ ನಿಗಧಿ ಮತ್ತು ಪ್ರತಿ 1000 ಜನಸಂಖ್ಯೆಗೆ ಒಬ್ಬ ಸದಸ್ಯರನ್ನು ನಿಗಧಿಪಡಿಸಲು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ಕ್ಕೆ ತಿದ್ದುಪಡಿ ತರುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ. |
| (ಈ) | ತ್ರಿಸ್ಥರ ಪಂಚಾಯತ್ ರಾಜ್ ಸಂಸ್ಥೆಗಳ ಸದಸ್ಯರುಗಳಿಗೆ ಪಕ್ಕದ ಇತರೆ ರಾಜ್ಯಗಳಿಗಿಂತ ಕಡಿಮೆ ಗೌರವಧನ ಮತ್ತು ಇತರ ಸವಲತ್ತುಗಳನ್ನು ನೀಡಲಾಗುತ್ತಿದ್ದು, ಇವುಗಳನ್ನು ಯಾವಾಗ ಪರಿಷ್ಕರಿಸಿ ಅನುಷ್ಠಾನಕ್ಕೆ ತರಲಾಗುವುದು: | 1. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪಂರಾ 126 ಜಿಪಸ 2022, ದಿನಾಂಕ:18.12.2022ರನ್ವಯ ಗ್ರಾಮ ಪಂಚಾಯತಿ ಅಧ್ಯಕ್ಷರಿಗೆ ರೂ.3,000/- ಗಳಿಂದ ರೂ.6000/-ಗಳಿಗೆ, ಉಪಾಧ್ಯಕ್ಷರಿಗೆ ರೂ.2000 ಗಳಿಂದ ರೂ.4000/-ಗಳಿಗೆ ಮತ್ತು ಸದಸ್ಯರಿಗೆ ರೂ.1000/- ಗಳಿಂದ ರೂ.2000/-ಗಳಿಗೆ ಗೌರವಧನವನ್ನು ಪರಿಷ್ಕರಿಸಿ, ಆದೇಶಿಸಲಾಗಿರುತ್ತದೆ. |

| | | |
|---|---|---|
| | | 2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 116 ಜಿಪಸ 2017, ದಿನಾಂಕ:03.05.2017ರನ್ವಯ ತಾಲ್ಲೂಕು ಪಂಚಾಯತಿ ಅಧ್ಯಕ್ಷರಿಗೆ ರೂ.4500/-ಗಳಿಂದ ರೂ.6000/-ಗಳಿಗೆ, ಉಪಾಧ್ಯಕ್ಷರಿಗೆ ರೂ.3000/-ಗಳಿಂದ ರೂ.4,000/-ಗಳಿಗೆ ಹಾಗೂ ಸದಸ್ಯರಿಗೆ ರೂ.1500/-ಗಳಿಂದ ರೂ. 3000/-ಗಳಿಗೆ ಗೌರವಧನ ಪರಿಷ್ಕರಿಸಿ, ಆದೇಶಿಸಲಾಗಿರುತ್ತದೆ.<br><br>3. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 116 ಜಿಪಸ 2017, ದಿನಾಂಕ:03.05.2017ರನ್ವಯ ಜಿಲ್ಲಾ ಪಂಚಾಯತಿ ಅಧ್ಯಕ್ಷರಿಗೆ ರೂ.6000/-ಗಳಿಂದ ರೂ.35,000/-ಗಳಿಗೆ, ಉಪಾಧ್ಯಕ್ಷರಿಗೆ ರೂ.4500/-ಗಳಿಂದ ರೂ.15,000/-ಗಳಿಗೆ ಹಾಗೂ ಸದಸ್ಯರಿಗೆ ರೂ.3000/-ಗಳಿಂದ ರೂ.5000/-ಗಳಿಗೆ ಗೌರವಧನ ಪರಿಷ್ಕರಿಸಿ, ಆದೇಶಿಸಲಾಗಿರುತ್ತದೆ. ಜಿಲ್ಲಾ ಪಂಚಾಯತಿ ಅಧ್ಯಕ್ಷರಿಗೆ ರಾಜ್ಯ ಸಚಿವರ ಸ್ಥಾನಮಾನವನ್ನು ನೀಡಲಾಗಿದೆ. ಅಧ್ಯಕ್ಷರಿಗೆ ವೇತನ ಮತ್ತು ಭತ್ಯೆಗಳನ್ನು ನಿಯಮಾನುಸಾರ ಭರಿಸಲು ಅವಕಾಶ ಕಲ್ಪಿಸಲಾಗಿದೆ.<br><br>4. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪಂರಾ 12 ಜಿಪಸ 2025, ದಿನಾಂಕ:16.01.2025ರನ್ವಯ ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳ ಚುನಾಯಿತ ಪ್ರತಿನಿಧಿಗಳಿಗೆ ಪ್ರಸ್ತುತ ನೀಡಲಾಗುತ್ತಿರುವ ಉಪವೇಶನ ಶುಲ್ಕವನ್ನು ರೂ.300/-ಗಳಿಂದ ರೂ.350/-ಗಳಿಗೆ ಹೆಚ್ಚಿಸಿ ಆದೇಶಿಸಲಾಗಿರುತ್ತದೆ.<br><br>ಮೇಲೆ ತಿಳಿಸಿರುವಂತೆ ತ್ರಿಸ್ತರ ಪಂಚಾಯತ್ ರಾಜ್ ಸಂಸ್ಥೆಗಳ ಸದಸ್ಯರುಗಳಿಗೆ ಗೌರವಧನ ಪರಿಷ್ಕರಣೆ ಮಾಡಿ ಅನುಷ್ಠಾನಕ್ಕೆ ತರಲಾಗಿದೆ. |
| (ಉ) | ಗ್ರಾಮ ಪಂಚಾಯತಿ ಆಡಳಿತ ಸುಧಾರಣೆ ಕುರಿತು ಈಗಾಗಲೇ ಹಲವು ಶಾಸಕರು, ಸ್ಥಳೀಯ ಸಂಸ್ಥೆಗಳ ಸದಸ್ಯರ ಒಕ್ಕೂಟ, ಅಧಿಕಾರಿ/ಸಿಬ್ಬಂದಿಗಳ ಸಂಘಗಳು ಹಲವಾರು ಮನವಿಗಳನ್ನು ಸಲ್ಲಿಸಿದ್ದು, ಈ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು? | ಗ್ರಾಮ ಪಂಚಾಯತಿ ಆಡಳಿತ ಸುಧಾರಣೆ ಕುರಿತು ಈಗಾಗಲೇ ಹಲವು ಶಾಸಕರು, ಸ್ಥಳೀಯ ಸಂಸ್ಥೆಗಳ ಸದಸ್ಯರ ಒಕ್ಕೂಟ, ಅಧಿಕಾರಿ/ಸಿಬ್ಬಂದಿಗಳ ಸಂಘಗಳು ಸಲ್ಲಿಸಿರುವ ಮನವಿಗಳಲ್ಲಿ ಕೆಲವು ಬೇಡಿಕೆಗಳನ್ನು ಈಗಾಗಲೇ ಈಡೇರಿಸಲಾಗಿರುತ್ತದೆ. ಉಳಿದ ಬೇಡಿಕೆಗಳು ಪರಿಶೀಲನಾ ಹಂತದಲ್ಲಿರುತ್ತವೆ. |

**ಸಂಖ್ಯೆ:** ಗ್ರಾಅಪ 936 ಗ್ರಾಪಂಅ 2025

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.